SRI M. M. J. SADYOJATHA (Minister for Transport and Minor Irrigation).—

(a) 16-8-1980.

(b) Rs. 15,68,000.

(c) Estimate for constructing permanent Depot at KGF has been technically sanctioned for Rs. 15,68,000 on 29-11-1980. Tenders were invited on 23-12-1980 fixing the last date of receipt of tenders on 16-1-1981. Tenders received have been approved by the Corporation Board on 5-5-1981 and the work was started on 5-6-1981.

SRI C. M. ARUMUGHAM.—When the tenders were received on 16-1-1981, what was the reason to take five months to finalise the rate and accept the tender?

SRI M. M. J. SADYOJATHA.—The Board approved the tender on 5-5-1981. That was the delay.

SRI C. M. ARUMUGHAM.— Why there was delay when they received the tender on 16-1-1981?

SRI M. M. J. SADYOJATHA. —The Board had not met.

SRI C. M. ARUMUGHAM.—How many months ones does the KSRTC Board meet?

SRI M. M. J. SADYOJATHA. —The details are not with me now.

SRI C.M. ARUMUGHAM.—Does the amount of Rs. 15 68,000, include any provision for construction of quarters for the officers and staff?

SRI M. M. J. SADYOJATHA.—It includes quarters.

SRI C. M. ARUMUGHAM.—While giving this construction work to the Contractor, has the KSRTC prescribed any time limit?

SRI M. M. J. SADYOJATHA.—They have prescribed time limits of One-and-half years.

**Condition of Roads in Malanadu areas and Repairs thereon.**

722 SRI L. T. THIMMAPPA HEGDE (Sagar).—Will the Minister for Public Works be pleased to state :—

(a) whether it has come to the notice of the Government that the Public Works roads in Malnad region have become unfit for use due to damages caused frequently ;

(b) (1) whether it is a fact that C. D. works are inadequate for this area which is mostly hilly place ;

(2) whether it has come to the notice of the Government that there is no proper drainage arrangement and;

(3) repairs have not been effected to the roads due to reduction in weightage grant ;

(c) if so, whether increased grants could be given by taking into consideration the special conditions prevailing in Malnad area?

SRI KAGODU THIMMAPPA (Minister for Public Works).—

(a) It is a natural Phenomena that damages are being caused to the roads due to excess rainfall which is common in Malnad area. However, no road has become unfit for use.

(b) (1) Yes.

(2) Yes.

(3) No.

(c) 25% weightage grant is being given to Malnad area.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಸ್ವಾಮಿ, ಈ ಪ್ರಶ್ನೆಯ (ಆ)ಗೆ ಉತ್ತರವಾಗಿ ಮಲೆನಾಡಿ ಪ್ರದೇಶದಲ್ಲಿ ಸ್ವಾಭಾವಿಕವಾಗಿ ಬೀಳುವ ಹೆಚ್ಚು ಮಳೆಯಿಂದ ರಸ್ತೆಗಳು ಕೆಡುವುದು ವಾಸ್ತವವಾದ ಸಂಗತಿ. ಆದಾಗ್ಯೂ ಕೂಡ ಯಾವ ರಸ್ತೆಯೂ ಉಪಯೋಗವಿಲ್ಲದ ಸ್ಥಿತಿಗೆ ಬಂದಿಲ್ಲ ಎಂದು ಹೇಳಿದ್ದೀರಿ. ಈ ಉತ್ತರ ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಏತಕ್ಕೆಂದರೆ ತಾವು ಮಲೆನಾಡಿನಲ್ಲಿ ಹುಟ್ಟಿ ಆ ಭಾಗದಿಂದ ಬಂದಂಥಾವರು. ಅಲ್ಲದೆ ತಾವೇ ಈ ಖಾತೆಯ ಸಚಿವರಾಗಿದ್ದೀರಿ. ಬೇರೆ ಇನ್ನು ಯಾರಾದರೂ ಕೂಡ ಇಂಥಾ ಉತ್ತರ ಕೊಟ್ಟಿದ್ದರೆ ಅದು ಬೇರೆ ವಿಚಾರ. ತಮಗೆ ಮಲೆನಾಡಿನ ಸ್ಥಿತಿಗತಿ ಚೆನ್ನಾಗಿ ಗೊತ್ತಿದೆ. ಮೇಲಾಗಿ ಮಂತ್ರಿಯಾಗಿದ್ದೀರಿ. ಈ ತರಹ ಉತ್ತರ ಕೊಟ್ಟಿರುವುದು ಸರಿಯೇ? ಅಲ್ಲಿ ರಸ್ತೆಗಳೆಲ್ಲ ಹಾಳಾಗುತ್ತಾ ಇದೆಯೆಲ್ಲಾ ಅದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಸರಿಯಾಗಿದೆ. ಆದರಲ್ಲಿ ಏನೂ ತಪ್ಪಿಲ್ಲಾ. ಆದರೆ ಅವರ ನಿರೀಕ್ಷಣೆಗೆ ತಕ್ಕಂತೆ ಉತ್ತರ ಇಲ್ಲದಿರಬಹುದು. ಸರ್ಕಾರದ ದೃಷ್ಟಿಯಲ್ಲಿ ಆ ಬಗ್ಗೆ ಕೊಟ್ಟಿರತಕ್ಕಂಥಾ ಉತ್ತರ ಸ್ಪಷ್ಟವಾಗಿದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಸ್ವಾಮಿ, ಹೆಚ್ಚಿನ ಗುಡ್ಡಗಾಡು ಪ್ರದೇಶದ ಭಾಗಕ್ಕೆ ಸಿ. ಡಿ. ಕೆಲಸ ಮಾಡಿಸಿರುವುದು ಸಾಕಾಗುವುದಿಲ್ಲ. ತಾವೂ ಕೂಡ ಒಪ್ಪಿಕೊಂಡಿದ್ದೀರಿ. ಎರಡನೆಯದಾಗಿ ಅಲ್ಲಿ ಚರಂಡಿ ವ್ಯವಸ್ಥೆ ಸರಿಯಾಗಿಲ್ಲ ಅಂತ ಇರುವುದನ್ನೂ ಕೂಡ ತಾವು ಒಪ್ಪಿಕೊಂಡಿದ್ದೀರಿ. ಈ ಚರಂಡಿ ಕೆಲಸ ಮತ್ತು ಸಿ. ಡಿ. ವರ್ಕ್ಸ್ ಸರಿಯಾಗಿ ಆಗದೇ ಇರುವುದರಿಂದ ಮಳೆಗಾಲದಲ್ಲಿ ಬಂದಂಥಾ ನೀರು ರಸ್ತೆಗಳ ಮೇಲೆಲ್ಲಾ ಹರಿದು ಅಲ್ಲಿ ಬಸ್ಸುಗಳು ಸರಿಯಾಗಿ ಓಡಾಡುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥಾ ಪರಿಸ್ಥಿತಿ ಆಗಿದೆ. ಇಷ್ಟೇ ಅಲ್ಲದೆ ಮಾಡಿದ ರಸ್ತೆಗಳೂ ಕೂಡ ಅದನ್ನು ಸರಿಯಾಗಿ ಕಂಪ್ಲೀಟ್ ಮಾಡದೇ ಇರುವುದರಿಂದ ಬಸ್ಸುಗಳು ಆ ರಸ್ತೆಗಳ ಮೇಲೆ ಓಡಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದಕ್ಕೆ ಕಾರಣ ಅಲ್ಲಿ ಮೆಟಲಿಂಗ್ ವ್ಯವಸ್ಥೆ ಸರಿಯಾಗಿ ಆಗದೇ ಇರುವುದರಿಂದ ಹಾಗಾಗಿದೆ. ಅಲ್ಲಿ ಸ್ಕ್ರೀಪಿಂಗ್ ಮೆಟಲ್ ಹಾಕಿರುವುದಿಲ್ಲ. ಆದ್ದರಿಂದ ಅಲ್ಲಿ ಹೆಚ್ಚು ಸ್ಕ್ರೀಪಿಂಗ್ ಮೆಟಲ್ ಹಾಕಬೇಕಾಗಿದೆ. ಸಣ್ಣ ಸಣ್ಣ ಮೋರಿಗಳನ್ನು ಮಾಡಬೇಕಾಗುತ್ತದೆ. ಮಾಡಿರುವುದಿಲ್ಲ. ಈ ಬಗ್ಗೆ ಈಗ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ? ಈ ಬಗ್ಗೆ ವಿಶೇಷವಾಗಿ ಹೆಚ್ಚು ಹಣ ಒದಗಿಸಿ ಉಪಯೋಗವಾಗತಕ್ಕಂಥ ರಸ್ತೆಯನ್ನು ಸರಿಯಾಗಿ ದುರಸ್ತಿ ಮಾಡಿಸುವುದಕ್ಕೆ ಈವಾಗಲಾದರೂ ದುಡ್ಡು ಒದಗಿಸಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ?

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಸಾಮಾನ್ಯ ದುರಸ್ತಿ ಮತ್ತು ವಿಶೇಷ ದುರಸ್ತಿ ಅಂತ ಇದೆ ಆ ಹಣದಲ್ಲೇ ಕೆಲಸ ಮಾಡಿಸಬೇಕಾಗುತ್ತದೆ. ಸದಸ್ಯರಿಗೆ ಹೇಳಬೇಕಾದರೆ ಇದರಲ್ಲಿ ಮುಖ್ಯವಾಗಿ ಒಳ

ಚರಂಡಿ ದುರಸ್ತಿ ಕೆಲಸ ಮಾಡಿಸಬೇಕಾಗುತ್ತದೆ. ಇದನ್ನು ಮಾಡಿಸಬೇಕಾದರೆ ಅಲ್ಲಲ್ಲಿ ಸಣ್ಣ ಸಣ್ಣ ಮೋರಿಗಳನ್ನು ಮಾಡಿಸಬೇಕಾಗುತ್ತದೆ. ಆ ಕೆಲಸ ಮಾಡಿಸುತ್ತಿದ್ದೇವೆ. ಮತ್ತು ನಮ್ಮ ವರದಿ ಪ್ರಕಾರ ಮಲೆನಾಡಿನಲ್ಲಿ ಹೆಚ್ಚು ಮಳೆ ಬೀಳತಕ್ಕಂಥಾ ಪ್ರದೇಶಕ್ಕೆ ವಿಶೇಷ ದುರಸ್ತಿಗೆಂದು ಸಾಮಾನ್ಯ ದುರಸ್ತಿಗೆಂದು ಕೊಡತಕ್ಕಂಥಾ ಹಣದಲ್ಲೇ ಶೇಕಡ ೨೫ರಷ್ಟು ವೈಟೇಜ್ ಗ್ರಾಂಟನ್ನು ಅದಕ್ಕೆ ಕೊಡಲಾಗುತ್ತಿದೆ. ಅಂದರೆ ಶೇಕಡ ೨೫ರಷ್ಟು ಹಣ ಹೆಚ್ಚಾಗಿ ಆ ಭಾಗಕ್ಕೆ ಕೊಡುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರ ಒಂದು ನಿರೀಕ್ಷಣೆ ಪ್ರಕಾರ ಅಲ್ಲಿರುವ ಎಲ್ಲಾ ರಸ್ತೆಗಳನ್ನೂ ಒಂದೇ ಸಾರಿ ದುರಸ್ತಿ ಮಾಡಲಿಕ್ಕೆ ಆಗುವುದಿಲ್ಲ. ಅದಕ್ಕೆ ಕೆಲವು ತೊಂದರೆಯೂ ಇದೆ. ತಮಗೆ ಹೇಳಬೇಕಾದರೆ ಬಹಳ ವರ್ಷಗಳಿಂದಲೂ ಕೂಡ ನಮ್ಮ ಇಲಾಖೆಯಲ್ಲಿ ಗ್ಯಾಂಗ್‌ಮನ್ ಆಗಿದ್ದುಕೊಂಡು ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ಏನು ಕೆಲಸ ಮಾಡುತ್ತಿದ್ದಾರೋ ಅವರಿಗೆ ಈ ಸಿ. ಡಿ. ಕೆಲಸಕ್ಕೆ ಒದಗಿಸತಕ್ಕಂಥಾ ಹಣದಲ್ಲೇ ಖರ್ಚು ಮಾಡತಕ್ಕಂಥಾ ಪರಿಸ್ಥಿತಿ ಇದೆ. ಅವರನ್ನು ನಾವು ಕೆಲಸದಿಂದ ತೆಗೆಯುತ್ತಾ ಇಲ್ಲ. ಅವರನ್ನು ನಮ್ಮ ಇಲಾಖೆಯನ್ನು ಇಟ್ಟುಕೊಳ್ಳುವುದಕ್ಕೆ ಅವರನ್ನು ಮುಂದುವರೆಸಿಕೊಂಡು ಹೋಗುವುದಕ್ಕಾಗಿ ಈ ವರ್ಕ್‌ಗೆ ಇಟ್ಟಿರತಕ್ಕಂಥಾ ಹಣದಲ್ಲಿ ಅವರಿಗೂ ಖರ್ಚು ಮಾಡಬೇಕಾಗಿದೆ. ಆ ಎಸ್ಟಾಬ್ಲಿಷ್‌ಮೆಂಟ್‌ಗೆ ನಮಗೆ ಇದರಿಂದಲೆ ಖರ್ಚು ಮಾಡಬೇಕಾಗಿದೆ. ಬೇರೆ ಹಣವಿಲ್ಲ. ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಏನು ನಿರೀಕ್ಷಣೆ ಮಾಡಿಕೊಂಡಿದ್ದರು ಅಷ್ಟು ಸಿಕ್ಕಿಲ್ಲಾ. ಎರಡನೆಯದಾಗಿ ಮಳೆಗಾಲದಲ್ಲಿ ಈ ಚರಂಡಿ ನೀರಿನಿಂದ ರಸ್ತೆ ಮೇಲೆಲ್ಲಾ ನೀರು ಬಂದು ರಸ್ತೆಯೆಲ್ಲಾ ಹಾಳಾಗಿ ಬಸ್ಸುಗಳ ಓಡಾಟಕ್ಕೆ ವಾಹನಗಳ ಓಡಾಟಕ್ಕೆ ಸಾಧ್ಯವಿಲ್ಲವಾಗಿದೆ ಅಂತ ಹೇಳಿದರು. ಅಂಥಾ ಪರಿಸ್ಥಿತಿ ಬಂದಿದ್ದರೆ ಆ ಕೆಲಸವನ್ನು ಖಂಡಿತ ಮಾಡಿಸಿಕೊಡುತ್ತೇನೆ. ಆದರೆ ನನಗೆ ಗೊತ್ತಿರುವ ಹಾಗೆ ಅಂತ ಪರಿಸ್ಥಿತಿ ಬಂದಿಲ್ಲ. ಮಾನ್ಯ ಸದಸ್ಯರು ಎಲ್ಲಿ ಆ ತರಹ ಪರಿಸ್ಥಿತಿ ಬಂದಿದೆ ಅಂತ ನನ್ನ ಗಮನಕ್ಕೆ ತಂದರೆ ಆ ಭಾಗದಲ್ಲಿ ಅಲ್ಲಿ ವಿಶೇಷವಾಗಿ ಗಮನ ಕೊಟ್ಟು ದುರಸ್ತಿ ಕೆಲಸ ಮಾಡಿಸುವುದಕ್ಕೆ ಆದ್ಯತೆ ಕೊಡುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಸ್. ಟಿ. ತಿಮ್ಮಪ್ಪ ಹೆಗಡೆ. – ಸ್ವಾಮಿ, ತಮಗೆ ಗೊತ್ತಿರುವ ಹಾಗೆ ಎರಡು ವರ್ಷದ ಹಿಂದೆ ಮಳೆ ಬಂದಾಗ ಕೆಲವು ಭಾಗದಲ್ಲಿ ರಸ್ತೆಗಳ ಮೇಲೆಲ್ಲಾ ನೀರು ಬಂದು ಹಾಳಾಗಿ ಅಲ್ಲಿ ರೈತರಿಗೆ ಬಹಳ ನಷ್ಟ ಉಂಟಾಗಿದೆ. ಹಿಂದೆ ಹೊಸದಾಗಿ ಆಗಿರತಕ್ಕಂಥಾ ರಸ್ತೆಗಳೂ ಕೂಡ ಹಾಳಾಗಿವೆ. ಆವೆಲ್ಲಾ ನಿಮ್ಮ ರಿವಿನ್ಯೂ ದಾಖಲೆಯಲ್ಲಿ ಇವೆ. ಬೇಕಾದರೆ ನೋಡಿ ಅಂಥಾ ರಸ್ತೆಗಳನ್ನು ಈ ವರ್ಷವಾದರೂ ಕೂಡ ದುರಸ್ತಿ ಮಾಡಿಸಿಕೊಡುತ್ತೇನೆಂದು ತಾವು ಭರವಸೆ ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ. —ಮಾನ್ಯ ಸದಸ್ಯರು ಹೇಳಿದಂಥಾ ಪ್ರಶ್ನೆ ಅದು ಇಡೀ ಮಲೆನಾಡು ಪ್ರದೇಶಕ್ಕೆ ಸೇರಿದಂಥಾ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರ ಭಾಗದಲ್ಲಿ ಯಾವುದಾದರೂ ರಸ್ತೆಗಳ ಕೆಲಸ ದುರಸ್ತಿ ಆಗಬೇಕಾಗಿದ್ದರೆ ಆ ಭಾಗದಲ್ಲಿ ವಾಹನ ಸಂಚಾರಕ್ಕೆ ಏನಾದರೂ ಅಡ್ಡಿ ಇದ್ದಿದ್ದರೆ, ಯಾವ ರಸ್ತೆಗಳ ದುರಸ್ತಿ ಕೆಲಸ ಅತ್ಯವಶ್ಯಕವಾಗಿ ಆಗಬೇಕಾಗಿದ್ದರೆ ಅಂತ ರಸ್ತೆಗಳು ಯಾವುವು ಎನ್ನುವುದರ ಪಟ್ಟಿಯನ್ನು ಮಾನ್ಯ ಸದಸ್ಯರು ಕೊಟ್ಟರೆ ಸಾಧ್ಯವಾದ ಅವಶ್ಯಕತೆಯ ಆಧಾರದ ಮೇಲೆ ಅಂಥಾ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

## Abolition of Teachers and Graduates Constituencies in the State.

482 SRI M. GANGANNA (Kusthagi).—Will the Chief Minister be pleased to state :—

(a) the number of teachers and graduates constituencies in the State ;

(1) the names of the districts included in the said Constituencies ;

(2) whether Government intended to reorganise these Constituencies;